ಕರ್ನಾಟಕ ವಿಧಾನ ಸಭೆ
KARNTAKA LEGISLATIVE ASSEMBLY

ಸೋಮವಾರ, ೩೦ನೇ ಸೆಪ್ಟೆಂಬರ್ ೧೯೯೧, ಆಶ್ವಯುಜ ೮, ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಬೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧ ಗಂಟೆ ೨೫ ನಿಮಿಷಕ್ಕೆ ಸಮಾವೇಶಗೊಂಡಿತು.

ಸನ್ಮಾನ್ಯ ಉಪಾಧ್ಯಕ್ಷರಾದ **(ಶ್ರೀಮತಿ ನಾಗಮ್ಮ ಕೇಶವಮೂರ್ತಿ)** ಅವರು

ಪೀಠವನ್ನು ಅಲಂಕರಿಸಿದರು.

ಉಪಾಧ್ಯಕ್ಷರು : ಕರ್ನಾಟಕ ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಸ್.ವಿ. ರಾಮೇಗೌಡರು, ದಿನಾಂಕ : 28-9-91ರಂದು ಮಾಲೂರಿನಲ್ಲಿ ನಿಧನರಾದ ಸುದ್ದಿಯನ್ನು ನೊಂದ ಮನಸ್ಸಿನಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಶ್ರೀಯುತರು, ವೃತ್ತಿಯಲ್ಲಿ ಕೃಷಿಕರಾಗಿದ್ದರು. 1962 ರಿಂದ 1967ರ ವರೆಗೆ ಮೂರನೇ ವಿಧಾನ ಸಭೆಯ ಸದಸ್ಯರಾಗಿ ಮಾಲೂರು ಕ್ಷೇತ್ರವನ್ನು ಪ್ರತಿನಿಧಿಸಿ ಸೇವೆ ಸಲ್ಲಿಸಿರುತ್ತಾರೆ. ಮಾಲೂರು ತಾಲ್ಲೂಕು ಎ.ಪಿ.ಎಂ.ಸಿ.ಸಂಘದ ಹಾಗೂ ಮಾಲೂರು ಗ್ರಾಮಪಂಚಾಯ್ತಿಯ ...

ಶ್ರೀ ಡಿ.ಬಿ. ಚಂದ್ರೇಗೌಡ : ಇದರ ಜೊತೆಗೆ, ಶಂಭಾ ಜೋಶಿ ಮತ್ತು ಡಾ. ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರ ನಿಧನದ ಸುದ್ದಿಯನ್ನೂ ಸೇರಿಸಬಹುದು. ಏಕೆಂದರೆ ಇವರಿಗೆ ರಾಜ್ಯ ಸರ್ಕಾರದವರೂ ಗೌರವ ಕೊಟ್ಟಿದ್ದಾರೆ...

ಶ್ರೀ ವಾಟಾಳ್ ನಾಗರಾಜ್ : ಇವರಿಬ್ಬರೂ ಮಹಾನ್ ವ್ಯಕ್ತಿಗಳು ಇವರನ್ನೂ ಸಂತಾಪ ಸೂಚನೆಯಲ್ಲಿ ಸೇರಿಸಬೇಕು. ದೊಡ್ಡ ದೊಡ್ಡ ಸಾಹಿತಿಗಳು, ಕವಿಗಳೂ ನಿಧನ ಹೊಂದಿದಾಗ, ಸಂತಾಪ ಸೂಚಿಸುವ ಸಂಪ್ರದಾಯವನ್ನು ಹಾಕಬೇಕು..

ಉಪಾಧ್ಯಕ್ಷರು : ಮಾಲೂರು ತಾಲ್ಲೂಕು ಎ.ಪಿ.ಎಂ.ಸಿ.ಸಂಘದ ಹಾಗೂ ಮಾಲೂರೂ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ, ಭೂ ಅಡಮಾನ ಬ್ಯಾಂಕಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವುದರ ಜೊತೆಗೆ, ಅನೇಕ ಸಹಕಾರಿ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಕೀರ್ತಿ ಶ್ರೀಯುತರದಾಗಿರುತ್ತದೆ. ಇದೇ ಸಂದರ್ಭದಲ್ಲಿ ಶ್ರೀಯುತ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಶಂಭಾ ಜೋಷಿಯವರೂ ನಿಧನರಾಗಿರುವ ಬಗ್ಗೆ ತಿಳಿಸುತ್ತಾ, ಇವರೆಲ್ಲರ ಗೌರವಾರ್ಥ, ಮಾನ್ಯಸದಸ್ಯರು ಎದ್ದುನಿಂತು ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸನ್ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ನಂತರ, ದಿವಂಗತರ ಕುಟುಂಬವರ್ಗದವರಿಗೆ, ಈ ಸಭೆ ಅಂಗೀಕರಿಸಿದ ಸಂತಾಪ ಸೂಚನೆಯನ್ನು ಕಳುಹಿಸಿಕೊಡಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾಪರಿಷತ್ತಿನ ಚುನಾವಣೆಗಳನ್ನು ಆರು ತಿಂಗಳ ಕಾಲ ಮುಂದಕ್ಕೆ ಹಾಕುತ್ತೇವೆಂದು ಮಾನ್ಯ ಮಂತ್ರಿಗಳು ಪತ್ರಿಕೆಯಲ್ಲಿ ಹೇಳಿದ್ದಾರೆ.

ಪ್ರಕಟಣೆ

ಉಪಾಧ್ಯಕ್ಷರು : ಮಾನ್ಯ ಏಕಾಂತಯ್ಯನವರು ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿಕೊಟ್ಟಿದ್ದಾರೆ. ಈಗ ಮತ್ತೊಂದು ವಿಷಯ. I am very happy to announce that Hon'ble Speaker from Canada Procan Manitoba is amidst us in the Visitors' Gallery. He is seated in the Distinguished Visitors' Gallery. I, on behalf of all of you, extend a hearty and warm welcome to him.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೇ, ಮುಖ್ಯಮಂತ್ರಿಯವರ ಕ್ಷೇತ್ರವಾದ ಸೊರಬಾದಲ್ಲಿ ಪತ್ರಿಕಾಕರ್ತರ ಮೇಲೆ ಕೇಸ್ ಹಾಕಿದ್ದಾರೆ, ಅವರಿಗೆ ಬಂಧನ ಮಾಡುವಂಥ ಪ್ರಯತ್ನ ನಡೆದಿದೆ. ಮರ ಕಡಿಯುವ ಕಳ್ಳಸಾಗಣೆದಾರರಿಂದ...

ಉಪಾಧ್ಯಕ್ಷರು : ಅವರು ಪ್ರಿವಿಲೇಜ್ ಮೋಷನ್ ಕೊಟ್ಟಿದ್ದಾರೆ, ಅದಕ್ಕೆ ಪ್ರಿಯಾರಿಟಿ ಕೊಡಬೇಕಾಗಿದೆ. ಇದಾದ ಮೇಲೆ ನಿಮ್ಮನ್ನು ಕರೆಯುತ್ತೇನೆ.

ಹಕ್ಕು ಭಾದ್ಯತಾ ಸೂಚನೆ

ಸರ್ಕಾರ ಆಜ್ಞೆಗಳನ್ನು ಸದಸ್ಯರಿಗೆ ಒದಗಿಸದಿರುವುದು.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಉಪಾಧ್ಯಕ್ಷರೇ, ನಿಯಮ 191ರ ಪ್ರಕಾರ, ನಾನು ಹಕ್ಕುಬಾಧ್ಯತೆಯ ಪ್ರಶ್ನೆಯ ಸಂಬಂಧದಲ್ಲಿ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ. I have sent a notice under rule 191 raising a privilege issue regarding non-supply of Government Orders to the Members to discharge their functions in this House.

ದಿನಾಂಕ : 19-9-91ರಂದು ಕೆಲವು ಪ್ರಮುಖವಾದ ಸರ್ಕಾರಿ ಆದೇಶಗಳಲ್ಲಿ ಏನು ಅಡಕವಾಗಿದೆ, ಆ ವ್ಯವಹಾರಕ್ಕೆ ಸಂಬಂಧಿಸಿದಂತೆ, 4 ಸರ್ಕಾರಿ ಆದೇಶಗಳನ್ನು ಒದಗಿಸಬೇಕೆಂದು ತಮ್ಮ ಕಾರ್ಯಾಲಯದ ಸಿಬ್ಬಂದಿಯನ್ನು ವಿನಂತಿಸಿಕೊಂಡಿದ್ದೆ.

ವಿನಂತಿಸಿಕೊಂಡಿದ್ದಮೇಲೆ 20ನೇ ತಾರೀಖು ಆದರೂ ಸಹ ಅವು ನನಗೆ ಸಿಕ್ಕದೇ ಇದ್ದುದರಿಂದ ಮತ್ತು ಸದರಿ ವಿಷಯಗಳು ಕೋಟ್ಯಾಂತರ ರೂಪಾಯಿಗಳ ವ್ಯವಹಾರಕ್ಕೆ ಸಂಬಂಧಪಟ್ಟವಾಗಿದ್ದುದರಿಂದ ತೀವ್ರವಾಗಿ ಅವುಗಳನ್ನು ಒದಗಿಸಬೇಕೆಂದು ನಾನು ತಮ್ಮನ್ನು ಕೇಳಿಕೊಂಡಿದ್ದೆ. ಮತ್ತು 20ನೇ ತಾರೀಖು ಈ ಸದನದಲ್ಲಿ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ. ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಘನ್ಯ ಮುಖ್ಯ ಮಂತ್ರಿಗಳು ಅವು ಸರಕಾರಿ ಆದೇಶದಾಗಿರುವುದರಿಂದ ಅವನ್ನು ಮುಚ್ಚಿಡುವಂತಹ ಪ್ರಶ್ನೆ ಇಲ್ಲ. ಅವುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂಬ ಮಾತನ್ನೂ ಸಹ ಸಭೆಯಲ್ಲಿ ಆಡಿದರು. ತದನಂತರ 23.9.91ರಂದು ಸಂಬಂಧಪಟ್ಟಂತಹ ಇಲಾಖಾ ಕಾರ್ಯದರ್ಶಿಯವರು ಹೇಳುತ್ತಾರೆ, ಯಾವ ಒಂದು ಹಿನ್ನೆಲೆಯಲ್ಲಿ ಮತ್ತು ಯಾವ ನಿಯಮಗಳ ಪ್ರಕಾರ ಈ ಒಂದು ಆದೇಶಗಳನ್ನು ಒದಗಿಸಿಕೊಡಬೇಕೆಂಬುದನ್ನು ತಿಳಿಸಿ ಎಂಬ ಮಾತನ್ನು ಹೇಳುವುದರ ಮುಖಾಂತರ